# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:18-02-2026 ರಂದು ಬುಧವಾರ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ದಲ್ಲಿ ನಡೆದ 400ನೇ "ವಿಶೇಷ ಸಿಂಡಿಕೇಟ್ ಆನ್‌ಲೈನ್ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಪ್ರೊ. ಆರ್. ಹಿರೇಮಣಿನಾಯ್ಕ, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 5. | ಪ್ರೊ. ಕೇಶವ ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ (ಆನ್‌ಲೈನ್) | ಸದಸ್ಯರು |
| 6. | ಶ್ರೀ ಶಾಂತಕುಮಾರ್ ಜಿ.ಎಸ್. (ಆನ್‌ಲೈನ್) | ಸದಸ್ಯರು |
| 7. | ಶ್ರೀ ಶಶಿಧರ್ ಬಿ.ಎನ್. (ಆನ್‌ಲೈನ್) | ಸದಸ್ಯರು |
| 8. | ಶ್ರೀ ಉಲ್ಲಾಸ್ ಇ.ಜಿ. ಪ್ರಾಂಶುಪಾಲರು (ಆನ್‌ಲೈನ್) | ಸದಸ್ಯರು |
| 9. | ಡಾ. ಶೈಲಜಾ ಸಿದ್ದಪ್ಪ ಹೊಸಳ್ಳೇರ ಪ್ರಾಂಶುಪಾಲರು (ಆನ್‌ಲೈನ್) | ಸದಸ್ಯರು |
| 10. | ಡಾ. ಚಿದಾನಂದ ಎನ್.ಕೆ. ಪ್ರಾಂಶುಪಾಲರು (ಆನ್‌ಲೈನ್) | ಸದಸ್ಯರು |
| 11. | ಡಾ. ಎಂ. ವೆಂಕಟೇಶ್. ಪ್ರಾಂಶುಪಾಲರು (ಆನ್‌ಲೈನ್) | ಸದಸ್ಯರು |
| 12. | ಶ್ರೀ ಶಿವಕುಮಾರ್ ಎಂ. (ಆನ್‌ಲೈನ್) | ಸದಸ್ಯರು |
| 13. | ಶ್ರೀ ಲಕ್ಷ್ಮಿಕಾಂತ ಚಿಮನೂರು (ಆನ್‌ಲೈನ್) | ಸದಸ್ಯರು |
| 14. | ಪ್ರೊ. ಸಾಕಮ್ಮ ಬಿ. (ಆನ್‌ಲೈನ್) | ಸದಸ್ಯರು |
| 15. | ಶ್ರೀ ಮುಸಾವೀರ್ ಬಾಷಾ ಎಂ. (ಆನ್‌ಲೈನ್) | ಸದಸ್ಯರು |
| 16. | ಶ್ರೀ. ಕೆ.ಪಿ. ಶ್ರೀಪಾಲ್ (ಆನ್‌ಲೈನ್) | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |
| 5. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಹಾಗೂ ಆನ್‌ಲೈನ್ ಮೂಲಕ ಭಾಗವಹಿಸಿರುವ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. 2026-27ನೇ ಸಾಲಿನ ಕಾಲೇಜುಗಳ ಸಂಯೋಜನಾ ವರದಿಗಳನ್ನು ಸ್ಥಳೀಯ ಪರಿಶೀಲನಾ ಸಮಿತಿಗಳು ಸಿದ್ಧಪಡಿಸಿ ಸಲ್ಲಿಸಿದ್ದು, ಸದರಿ ವರದಿಗಳನ್ನು ಸರ್ಕಾರಕ್ಕೆ ತುರ್ತಾಗಿ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಸಲ್ಲಿಸಬೇಕಾಗಿರುವುದರಿಂದ ಈ ಕುರಿತು ಅನುಮೋದನೆಗಾಗಿ ಈ ದಿನ ವಿಶೇಷ ಸಿಂಡಿಕೇಟ್ ಆನ್‌ಲೈನ್ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ನಂತರ ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಇಂದಿನ ಸಭೆಯಲ್ಲಿ ಕುವೆಂಪು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ 2026-27ನೇ ಸಾಲಿನ ಸಂಯೋಜನಾ ವರದಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಇಂದಿನ ಸಭೆ ಆಯೋಜಿಸಿದ್ದು, ಇದಕ್ಕೆ ಸಭೆಯು ಅನುಮೋದನೆ ನೀಡಬೇಕಾಗಿದೆ ಎಂದು ತಿಳಿಸಿದರು.

ನಂತರ ಕಾರ್ಯ ಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2026–ಸಿಂ–2.01:** ಕಾಲೇಜುಗಳ 2026–27ನೇ ಸಾಲಿನ ಸಂಯೋಜಿತ ವರದಿಗಳನ್ನು ವಿಶೇಷ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸುವ ಬಗ್ಗೆ.

**ಚರ್ಚೆ:** ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕರಾದ ಪ್ರೊ. ಗಜಾನನ ಪ್ರಭು. ಬಿ. ಇವರು ಕಾಲೇಜುಗಳ ಸಂಯೋಜನಾ ವರದಿಯನ್ನು ಸಭೆಗೆ ಮಂಡಿಸಿದರು. 2026–27ನೇ ಸಾಲಿನಲ್ಲಿ ಸ್ಥಳೀಯ ತಪಾಸಣಾ ಸಮಿತಿಗಳು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಗೆ ಭೇಟಿ ನೀಡಿ ವರದಿಗಳನ್ನು ಸಲ್ಲಿಸಿರುತ್ತವೆ. ಸದರಿ ವರದಿಗಳನ್ನು ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ತುರ್ತಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಸಂಯೋಜನಾ ವರದಿಗಳನ್ನು ಇಂದಿನ ವಿಶೇಷ ಸಿಂಡಿಕೇಟ್ ಆನ್‌ಲೈನ್ ಸಭೆಯು ಈ ಬಗ್ಗೆ ಪರಿಶೀಲಿಸಿ ತನ್ನ ಅನುಮೋದನೆ ನೀಡಬೇಕೆಂದು ಕೋರಿದರು. ಸಭೆಗೆ ಕಾಲೇಜು ಅಭಿವೃದ್ಧಿ ಪರಿಷತ್‌ನಿಂದ ಸಿದ್ಧಪಡಿಸಲಾದ ಸಂಯೋಜನಾ ವರದಿಗಳನ್ನು ಸಭೆಗೆ ಮಂಡಿಸಿದರು. ಮುಂದುವರೆದು ಮಾತನಾಡಿದ ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕರು ಸರ್ಕಾರದ 2030ನೇ ಇಸವಿಯವರೆಗಿನ 05 ವರ್ಷಗಳ ಸಂಯೋಜನಾ ವೇಳಾಪಟ್ಟಿಯನ್ನು ಅನುಸರಿಸಬೇಕಾಗಿದ್ದು, ಇದಕ್ಕೆ ಸಭೆಯ ಅನುಮೋದನೆಯನ್ನು ಕೋರಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ 2026–27ನೇ ಸಾಲಿನ ಸಂಯೋಜಿತ ಕಾಲೇಜುಗಳ ಸ್ಥಳೀಯ ಸಮಿತಿ ತಪಾಸಣಾ ವರದಿಗಳನ್ನು ವಿಶೇಷ ಸಿಂಡಿಕೇಟ್ ಆನ್‌ಲೈನ್ ಸಭೆಯು ಪರಿಶೀಲಿಸಿ ಸ್ಥಳೀಯ ತಪಾಸಣಾ ಸಮಿತಿ ಸಂಯೋಜನೆಗೆ ಸಂಬಂಧಪಟ್ಟಂತೆ ಸಲ್ಲಿಸಿರುವ ಒಟ್ಟು 82 ಕಾಲೇಜುಗಳ ಸಂಯೋಜನಾ ವರದಿಗಳ ಪೈಕಿ ಈ ಕೆಳಕಂಡ 03 (ಮೂರು) ಕಾಲೇಜುಗಳಿಗೆ ಪುನ: ಹೊಸದಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಸ್ಥಳೀಯ ತಪಾಸಣಾ ಸಮಿತಿಯನ್ನು ರಚಿಸಿ, ಸಂಯೋಜನಾ ಪುನರ್ ಪರಿಶೀಲನೆಗೆ ನಿಯೋಜಿಸಲು ಸಭೆಯು ತೀರ್ಮಾನಿಸಿತು.

1) ರಾಜೀವ್‌ಗಾಂಧಿ ಶಿಕ್ಷಣ ಮಹಾವಿದ್ಯಾಲಯ, ಭದ್ರಾವತಿ.
2) ಎಸ್.ವಿ. ಶಿಕ್ಷಣ ಮಹಾವಿದ್ಯಾಲಯ, ತೀರ್ಥಹಳ್ಳಿ.
3) ಶ್ರೀ ಪಾರ್ಶ್ವನಾಥ ಮಹಿಳಾ ಶಿಕ್ಷಣ ಮಹಾವಿದ್ಯಾಲಯ, ಶಿವಮೊಗ್ಗ.

ಈ ಮೇಲ್ಕಂಡ 03 (ಮೂರು) ಕಾಲೇಜುಗಳನ್ನು ಹೊರತುಪಡಿಸಿ ಉಳಿದ 79 ಕಾಲೇಜುಗಳ ಸಂಯೋಜನಾ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ವಿಶೇಷ ಸಿಂಡಿಕೇಟ್ ಆನ್‌ಲೈನ್ ಸಭೆಯು ಅನುಮೋದಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

18/2/26

ಕುಲಸಚಿವರು
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಕುಲಪತಿಗಳು 18/2
ಕುಲಪತಿಗಳು
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ - 577 451,
ಶಿವಮೊಗ್ಗ ಜಿಲ್ಲೆ.